ಕಂದಕಗಳ ನಿರ್ಮಾಣ ಹಾಗೂ ಅವುಗಳಿಂದ ಆನೆಗಳ ಹಾವಳಿಯನ್ನು ತಡೆಗಟ್ಟುವುದು ಅವಶ್ಯಕವಾಗಿದೆ ಎಂದು ಅವರ ಮೊದಲ ವೇದಿಕೆಯಾಗಿದೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಒಂದು ಆನೆ ಒಂದು 21 ವರ್ಷಗಳ ಒಬ್ಬ ಹುಡುಗನನ್ನು.....

ಅಧ್ಯಕ್ಷರು : ನೀವು ಜಾಸ್ತಿ ಹೊತ್ತು ಮಾತನಾಡಿದರೆ ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಉಪ ಪ್ರಶ್ನೆಯನ್ನು ಕೇಳಿದರೆ ಮಾತ್ರ ಉತ್ತರ ಸಿಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ತಾತ್ಕಾಲಿಕವಾಗಿ ಈ ಕ್ರಂಚ್‌ಗಳನ್ನು ಮಾಡುವವರೆಗೆ ಪಟಾಕಿಗಳನ್ನು ಸರಬರಾಜು ಮಾಡಿ, ವಾಚರ್‌ಗಳನ್ನು ನೇಮಕ ಮಾಡಿ ಈ ಆನೆಗಳನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್.ವೈ. ಮೇಟಿ : ಗುಂಡ್ಲುಪೇಟೆ ಕ್ಷೇತ್ರದಲ್ಲಿ 15 ಕಿ.ಮೀ. ಕಂದಕವನ್ನು ತೆಗೆದಿದ್ದೇವೆ. ಆದರೆ ನಾವು ಉತ್ತರದಲ್ಲಿ ಕೊಟ್ಟಿದ್ದೇವೆ ಇಡೀ ಬಂಡಿಪುರದಲ್ಲಿ 210 ಕಿ.ಮೀ. ಆನೆ ನಿರೋಧಕ ಕಂದಕಗಳನ್ನು ತೆಗೆಯುವಂಥ ಯೋಚನೆ ಇದೆ. ಆದರೆ ಬಂಡಿಪುರ ಕ್ಷೇತ್ರದಲ್ಲಿ ಕೇವಲ 60 ಕಿ.ಮೀ. ಮಾತ್ರ ಕಂದಕ ತೆಗೆಯುವುದು ಬಾಕಿ ಉಳಿದಿದೆ. ಈಗ 5 ಕಿ.ಮೀ. ತೆಗೆಸುವ ಸಲುವಾಗಿ ನಾವು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈಗ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಉಳಿದದ್ದನ್ನು ಕೇಂದ್ರ ಸರ್ಕಾರದಿಂದ ಆನೆ ಯೋಜನೆಯಿಂದ ಹಣ ಬಂದ ನಂತರ ಹಂತ ಹಂತವಾಗಿ ಕೆಲಸ ಮಾಡುತ್ತೇವೆ. ಮತ್ತು ಈಗಾಗಲೇ ಆನೆಗಳನ್ನು ಓಡಿಸುವ ಸಲುವಾಗಿ ನಾವು ಕೆಲವು ವಾಚರ್‌ಗಳನ್ನು ನೇಮಕ ಮಾಡುವುದಕ್ಕೋಸ್ಕರ ಗ್ರಾಮೀಣ ಜನರನ್ನು ಕಾಂಟ್ರಾಕ್ಟ್ ಹಾಗೂ ದಿನಗೂಲಿ ಆಧಾರದ ಮೇಲೆ ತೆಗೆದುಕೊಂಡು ಅವರಿಗೆ ಪಟಾಕಿ ಹಾಗೂ ಮದ್ದು ಗುಂಡುಗಳನ್ನು ಕೊಟ್ಟು ಆನೆಗಳನ್ನು ಓಡಿಸುವ ವ್ಯವಸ್ಥೆ ಮಾಡುತ್ತಿದ್ದೇವೆ. ಇನ್ನು ಮುಂದೆಯೂ ಸಹ ಹೆಚ್ಚಿನ ರೀತಿಯಲ್ಲಿ ನಾವು ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ಪುತ್ತೂರು ತಾಲ್ಲೂಕಿನಲ್ಲಿಯೂ ಕೂಡ ಕಂದಕಗಳನ್ನು ತೋಡುವುದರ ಮೂಲಕ ಒಂದು ಪರಮನಂಟಾಗಿ ಯಾವುದೇ ರೀತಿಯ ಕಾದು ಆನೆಗಳ ಬರದ ರೀತಿಯಲ್ಲಿ ಏನಾದಾರೂ ಪ್ರಯತ್ನ ಮಾಡಲಾಗಿದೆಯೇ? ಒಂದು ವೇಳೆ ಸರ್ಕಾರದ ಗಮನದಲ್ಲಿ ಇಲ್ಲದಿದ್ದರೆ ಆ ರೀತಿಯ ಯೋಜನೆಯನ್ನು ಸರ್ಕಾರದವರು ಹಮ್ಮಿಕೊಳ್ಳುವರೇ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ವೈ. ಮೇಟಿ : ಈ ಯೋಜನೆ ಹಮ್ಮಿಕೊಳ್ಳಲು ಪ್ರಯತ್ನ ಪಟ್ಟು ಕಾಡಾನೆಯಿಂದ ಹಾನಿಯಾಗದಂತೆ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು : ಅಮರೇಗೌಡ ಪಾಟೀಲ್‌ರವರೆ, ಸರ್ಕಾರದವರು ನಿಮ್ಮ ಪ್ರಶ್ನೆಗೆ ಉತ್ತರ ಒದಗಿಸುವುದಕ್ಕೆ ಒಂದು ವಾರ ಸಮಯ ಕೇಳಿದ್ದಾರೆ. ಉತ್ತರ ಬಂದ ಮೇಲೆ ಒದಗಿಸಿಕೊಡಲಾಗುವುದು.

ಸರ್ಕಾರಿ ಆರೋಗ್ಯ ಕೇಂದ್ರಗಳ ವಿವರ ಹಾಗೂ ಸಿಬ್ಬಂದಿ ಮತ್ತು ಔಷಧಿಗಳ ವಿವರ ಕುರಿತು

2635 - ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾನಗಲ್ ತಾಲ್ಲೂಕಿನಲ್ಲಿ ಮಂಜೂರಾದ ಸರ್ಕಾರಿ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಈ ಕೇಂದ್ರಗಳಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆಗಳು ಎಷ್ಟು? ಹಾಗೂ ಈ ಕೇಂದ್ರಗಳಲ್ಲಿ ಮಂಜೂರಾದ ಎಲ್ಲಾ ಹುದ್ದೆಗಳು ತುಂಬಲಾಗಿದೆಯೇ?

ಇ) ಈ ಕೇಂದ್ರಗಳಲ್ಲಿ ಔಷಧಿಗಳಿಗಾಗಿ ನಿಗಧಿ ಪಡಿಸಿದ ಹಣಕಾಸಿನ ಮೌಲ್ಯವೆಷ್ಟು? ಹಾಗೂ ನಿಗಧಿಪಡಿಸಿದ ಮೌಲ್ಯದಷ್ಟು ಹಣವನ್ನು ಔಷಧಿಗಳಿಗಾಗಿ ಬಿಡುಗಡೆ ಮಾಡಲಾಗಿದೆಯೇ?

ಡಾ॥ ಎಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು) :

ಅ)	ಪ್ರಾಥಮಿಕ ಆರೋಗ್ಯ ಕೇಂದ್ರಗಳು	8
ಆ)	ಮಂಜೂರಾದ ಹುದ್ದೆಗಳು	126
	ತುಂಬಲಾದ ಹುದ್ದೆಗಳ ಸಂಖ್ಯೆ	112
	ಖಾಲಿ ಇರುವ ಹುದ್ದೆಗಳು	14

ಇ) 1994-95ನೇ ಸಾಲಿನಲ್ಲಿ ಸರ್ಕಾರಿ ಔಷಧಿ ಮಳಿಗೆಯಿಂದ, ಈ ಕೇಂದ್ರಗಳಿಗೆ, ಔಷಧಿ ಸರಬರಾಜು ಮಾಡಾಲು ನಿಗಧಿಪಡಿಸಿದ ಅನುದಾನ ರೂ. 2,40,000-00. ಈ ಹಣವನ್ನು ಪೂರ್ತಿಯಾಗಿ ಬಿಡುಗಡೆ ಮಾಡಲಾಗಿದೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಹಾನಗಲ್ ತಾಲ್ಲೂಕಿನಲ್ಲಿ ಖಾಲಿ ಇರುವ ಸ್ಥಳಗಳು ಕೇವಲ 8 ಎಂದು ಘೋಷಣೆಯಾಗಿ ಇದರಲ್ಲಿ 14 ಎಂದು ಕೊಟ್ಟಿದ್ದಾರೆ. ಆದರೆ ಈ 14ರಲ್ಲಿ 6 ವೈದ್ಯಾಧಿಕಾರಿಗಳ ಸ್ಥಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದನ್ನು ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಹಾಗೂ 8 ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 2.5 ಲಕ್ಷ ಜನಸಂಖ್ಯೆ ಇರುವಂಥ ಒಂದು ತಾಲ್ಲೂಕಿಗೆ ತಲಾವಾರು ಒಬ್ಬ ಮನುಷ್ಯನಿಗೆ ಒಂದು ರೂಪಾಯಿ ಒಂದು ವರ್ಷಕ್ಕೆ ಔಷಧವನ್ನು ಸರಬರಾಜು ಮಾಡುವುದಕ್ಕೆ ಆಗದಂಥ ಒಂದು ಪರಿಸ್ಥಿತಿ ಆಗುತ್ತದೆ. ಆದ ಪ್ರಯುಕ್ತ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡು ಜನಸಂಖ್ಯೆ ಎಲ್ಲಿ ಹೆಚ್ಚಿದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಲಕ್ಷಕ್ಕಿಂತ ಹೆಚ್ಚು ಔಷಧಿಗಳನ್ನು ಸರಬರಾಜು ಮಾಡುವ ಯೋಜನೆ ಸರ್ಕಾರದ ಗಮನದಲ್ಲಿಯೇ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಆರೋಗ್ಯ ಸಚಿವರ ಪರವಾಗಿ) : ಮಾನ್ಯ ಸಭಾಧ್ಯಕ್ಷರೇ, ಖಾಲಿ ಇರತಕ್ಕಂಥ ಹುದ್ದೆಗಳನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಆರ್ಥಿಕ ನಿರ್ಬಂಧವನ್ನು ಸಡಿಲ ಮಾಡಿದ್ದಾರೆ. ಈ ವರ್ಷ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕೊಡಬೇಕಾಗಿರತಕ್ಕಂಥ ಹೆಚ್ಚಿಗೆ ಹಣದ ಬಗ್ಗೆ ಕೇಳಿದ್ದಾರೆ. ಈಗ ಪ್ರತಿಯೊಂದು ಆರೋಗ್ಯ ಕೇಂದ್ರಗಳಿಗೆ 15 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆದರೆ ನೀವು ಕೇಳುತ್ತಿರುವುದು ಪ್ರತಿಯೊಂದು ಆರೋಗ್ಯ ಕೇಂದ್ರಗಳಿಗೆ ಒಂದು ಲಕ್ಷ ರೂಪಾಯಿಗಳು. ಇಷ್ಟು ಹಣವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಖಂಡಿತ ಸಾಧ್ಯವಿಲ್ಲ. ಏಕೆಂದರೆ ಸಂಪನ್ಮೂಲಗಳ ಕೊರತೆ ಇದೆ. ಆದರೂ ಕೂಡ ಸ್ವಲ್ಪ ಮಟ್ಟಿಗೆ ಹೆಚ್ಚಿಸಲಿಕ್ಕೆ ಸರ್ಕಾರ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತದೆಯೆಂದು ಹೇಳುತ್ತೇನೆ.

ಸಾಮಾಜಿಕ ಅರಣ್ಯ ಯೋಜನೆ

2316 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?